EXAMINATION CODE : 4

| ಜಿಲ್ಲಾ ಸಂಕೇತ | | ನೋಂದಣಿ ಸಂಖ್ಯೆ | | | | | |
|---|---|---|---|---|---|---|---|
| 4 | 5 | 7 | 4 | 7 | 4 | 4 | 9 |

| ಪ್ರಶ್ನೆ ಪತ್ರಿಕೆ ಪುಸ್ತಿಕೆ ಕ್ರಮಸಂಖ್ಯೆ |
|---|
| 225347 |

# ಪ್ರಶ್ನೆ ಪತ್ರಿಕೆ ಪುಸ್ತಿಕೆ - ಪ್ರಥಮ ಪತ್ರಿಕೆ

2009

**(ಪ್ರಶ್ನೆ ಪತ್ರಿಕೆಯಲ್ಲಿನ ಎಲ್ಲಾ ಸೂಚನೆಗಳನ್ನು ದಯವಿಟ್ಟು ಓದಿ)**

**ವಿಷಯಗಳು : ಸಾಮಾನ್ಯ ಜ್ಞಾನ, ಶೈಕ್ಷಣಿಕ ಮನೋವಿಜ್ಞಾನ ಮತ್ತು ಮಾನಸಿಕ ಸಾಮರ್ಥ್ಯ**

**ಗರಿಷ್ಠ ಅಂಕಗಳು : 100** **ಗರಿಷ್ಠ ಅವಧಿ : 2 ಗಂಟೆಗಳು** **ವಿಷಯ ಸಂಕೇತ : GP**

**(9.00 a.m. to 11.00 a.m.)**

**(ಓ.ಎಂ.ಆರ್. ಉತ್ತರ ಪತ್ರಿಕೆ ಮುಖಪುಟದಲ್ಲಿ ಕೇಳಿರುವ ವಿವರಗಳನ್ನು ಭರ್ತಿಮಾಡಲು ನೀಡುವ ಪ್ರಾರಂಭಿಕ 10 ನಿಮಿಷಗಳೂ ಸೇರಿದಂತೆ.)**

## ಅಭ್ಯರ್ಥಿಗಳಿಗೆ ಸೂಚನೆಗಳು

1. 100 ಪ್ರಶ್ನೆಗಳಿರುವ ಮೊಹರಾಗಿರುವ ಪ್ರಶ್ನೆಪತ್ರಿಕೆ ಪುಸ್ತಿಕೆಯಲ್ಲಿ ಬಿಡಿ ಓ.ಎಂ.ಆರ್. ಉತ್ತರ ಪತ್ರಿಕೆಯು ಅಡಕಗೊಂಡಿದೆ ಇದನ್ನು ನಿಮಗೆ ನೀಡಲಾಗಿದೆ.
2. ಪ್ರಶ್ನೆಪತ್ರಿಕೆಯ ಸೀಲನ್ನು ಅತೀ ಜಾಗರೂಕತೆಯಿಂದ ಬಿಡಿಸಿ ಅಡಕವಾಗಿರುವ ಓ.ಎಂ.ಆರ್. ಬಿಡಿ ಉತ್ತರ ಪತ್ರಿಕೆಯನ್ನು ಹೊರತೆಗೆದು, ಓ.ಎಂ.ಆರ್. ಉತ್ತರ ಪತ್ರಿಕೆಯಲ್ಲಿ ಕೇಳಿರುವ ಮಾಹಿತಿಯನ್ನು ಅತೀ ಜಾಗರೂಕತೆಯಿಂದ ಕ್ರಮಸಂಖ್ಯೆ 1 ರಿಂದ 6 ರವರೆಗೂ ಭರ್ತಿ ಮಾಡಿ. ತಪ್ಪಿದಲ್ಲಿ ಮೌಲ್ಯಮಾಪನದಲ್ಲಿ ಉಂಟಾಗುವ ತೊಡಕು ಮತ್ತು ಪರಿಣಾಮಗಳಿಗೆ ನೀವೇ ಜವಾಬ್ದಾರರು.
3. ನಿಮಗೆ ಕೊಟ್ಟಿರುವ ಪ್ರಶ್ನೆಪತ್ರಿಕೆಯ ಕ್ರಮಸಂಖ್ಯೆಯನ್ನು ನಿಮಗೆ ನೀಡಿರುವ ಓ.ಎಂ.ಆರ್. ಉತ್ತರಪತ್ರಿಕೆಯಲ್ಲಿನ ಕ್ರಮಸಂಖ್ಯೆ 4 ರಲ್ಲಿ ಭರ್ತಿ ಮಾಡಬೇಕು.
4. ಪರೀಕ್ಷಾ ಅವಧಿಯಲ್ಲಿ :-
   (ಅ) ಪ್ರತಿ ಪ್ರಶ್ನೆಯನ್ನು ಜಾಗರೂಕತೆಯಿಂದ ಓದಿರಿ.
   (ಆ) ಪ್ರತಿ ಪ್ರಶ್ನೆಗೆ ನೀಡಲಾಗಿರುವ ನಾಲ್ಕು ಉತ್ತರಗಳ ಪೈಕಿ ಸರಿಯಾದ ಉತ್ತರವನ್ನು ಕಂಡುಹಿಡಿಯಿರಿ.
   (ಇ) ಓ.ಎಂ.ಆರ್. ಉತ್ತರ ಪತ್ರಿಕೆಯಲ್ಲಿ ಪ್ರತಿ ಪ್ರಶ್ನೆಗೆ ಸರಿ ಹೊಂದುವ ಉತ್ತರವನ್ನು ಗುರುತಿಸಲು ನೀಡಲಾಗಿರುವ ನಾಲ್ಕು ವೃತ್ತಗಳ ಪೈಕಿ ಸರಿಯಾದ ವೃತ್ತವನ್ನು ನೀಲಿ/ಕಪ್ಪು ಶಾಯಿಯ ಬಾಲ್ ಪಾಯಿಂಟ್ ಪೆನ್ ಮಾತ್ರ ಉಪಯೋಗಿಸಿ ಗುರುತು ಮಾಡಿ. ಉದಾಹರಣೆಗೆ, ಒಂದು ಪ್ರಶ್ನೆ ಪತ್ರಿಕೆಯಲ್ಲಿನ 20ನೇ ಪ್ರಶ್ನೆಯ ಸರಿ ಉತ್ತರವು ಕ್ರಮಸಂಖ್ಯೆ (3) ಆಗಿದ್ದಲ್ಲಿ ಓ.ಎಂ.ಆರ್. ಉತ್ತರ ಪತ್ರಿಕೆಯಲ್ಲಿ ಕ್ರಮಸಂಖ್ಯೆ 20 ರ ಮುಂದೆ ಈ ಕೆಳಗೆ ತಿಳಿಸಿರುವ ರೀತಿಯಲ್ಲಿ ನೀಲಿ/ಕಪ್ಪು ಬಾಲ್ ಪಾಯಿಂಟ್ ಪೆನ್ ಉಪಯೋಗಿಸಿ ವೃತ್ತವನ್ನು ಗುರುತು ಮಾಡುವುದು.

   **20.** (1) (2) ● (4) (ಇದು ಉದಾಹರಣೆ ಮಾತ್ರ)
5. ಪ್ರಶ್ನೆ ಪತ್ರಿಕೆ ಪುಸ್ತಿಕೆಯ ಪುಟಗಳಲ್ಲಿ ಖಾಲಿ ಜಾಗ ಬಿಟ್ಟಿರುವಲ್ಲಿ ಮಾತ್ರ ಉತ್ತರವನ್ನು ಕಂಡು ಹಿಡಿಯುವ ಕಚ್ಚಾ ಕಾರ್ಯವನ್ನು (ರಫ್ ವರ್ಕ್) ಮಾಡತಕ್ಕದ್ದು. ಕಚ್ಚಾ ಕಾರ್ಯವನ್ನು ಓ.ಎಂ.ಆರ್. ಉತ್ತರ ಪತ್ರಿಕೆಯಲ್ಲಿ ಮಾಡತಕ್ಕದ್ದಲ್ಲ.
6. ಒಂದು ಪ್ರಶ್ನೆಗೆ ಉತ್ತರವಾಗಿ ಒಂದಕ್ಕಿಂತ ಹೆಚ್ಚು ವೃತ್ತಗಳನ್ನು ಗುರುತು ಮಾಡಿದಲ್ಲಿ ಅಂತಹ ಉತ್ತರಗಳಿಗೆ ಅಂಕಗಳನ್ನು ನೀಡಲು ಬರುವುದಿಲ್ಲ. ಇದರ ಉದಾಹರಣೆಯನ್ನು ಓ.ಎಂ.ಆರ್. ಉತ್ತರ ಪತ್ರಿಕೆಯಲ್ಲಿ ನೋಡಿ.
7. ಓ.ಎಂ.ಆರ್. ಉತ್ತರ ಪತ್ರಿಕೆಯ ನಿಗದಿತ ಸ್ಥಳದಲ್ಲಿ ಅಭ್ಯರ್ಥಿ ಹಾಗೂ ಕೊಠಡಿ ಮೇಲ್ವಿಚಾರಕರು ತಪ್ಪದೇ ಸಹಿ ಮಾಡಬೇಕು. ನಿಗದಿತ ಸ್ಥಳದಲ್ಲಿ ಕಡ್ಡಾಯವಾಗಿ ಅಭ್ಯರ್ಥಿ ಎಡಗೈ ಹೆಬ್ಬೆರಳಿನ ಗುರುತನ್ನು ಹಾಕುವುದು.
8. ನಿಮಗೆ ಉತ್ತರಿಸಲು ನೀಡಿರುವ ಓ.ಎಂ.ಆರ್. ಉತ್ತರ ಪತ್ರಿಕೆಯು ಕಾರ್ಬನ್ ರಹಿತ ಪ್ರತಿಯೊಂದಿಗೆ ಇದೆ. ಪರೀಕ್ಷಾ ಅವಧಿ ಮುಗಿದ ನಂತರ, ಉತ್ತರಿಸಿದ ಮೂಲ ಓ.ಎಂ.ಆರ್. ಉತ್ತರ ಪತ್ರಿಕೆಯನ್ನು ಕೊಠಡಿ ಮೇಲ್ವಿಚಾರಕರಿಗೆ ಒಪ್ಪಿಸತಕ್ಕದ್ದು. ಕಾರ್ಬನ್ ಪ್ರತಿಯನ್ನು ಅಭ್ಯರ್ಥಿಯು ಇಟ್ಟುಕೊಳ್ಳಬೇಕು.
9. ಪರೀಕ್ಷಾ ಕೊಠಡಿಯೊಳಗೆ ಕ್ಯಾಲ್ಕ್ಯುಲೇಟರ್, ಪೇಜರ್ ಮತ್ತು ಮೊಬೈಲ್ ದೂರವಾಣಿಯನ್ನು ತರುವುದನ್ನು ನಿಷೇಧಿಸಿದೆ.
10. ಪರೀಕ್ಷಾ ಸಮಯದಲ್ಲಿ ಯಾವುದೇ ರೀತಿಯ ಅವ್ಯವಹಾರ ಕಂಡು ಬಂದಲ್ಲಿ ಅಂತಹವರನ್ನು ನೇಮಕಾತಿಗೆ ಅರ್ಹರಲ್ಲವೆಂದು ಪರಿಗಣಿಸಿ ನಿಯಮಾನುಸಾರ ಕ್ರಮ ಜರುಗಿಸಲಾಗುವುದು.

### ಓ.ಎಂ.ಆರ್. ಉತ್ತರಪತ್ರಿಕೆ ಭರ್ತಿ ಮಾಡಲು ಸೂಚನೆಗಳು

**(1) ಪ್ರತಿಯೊಂದು ಪ್ರಶ್ನೆಗೂ ಒಂದೇ ಒಂದು ಸರಿಯಾದ ಉತ್ತರವಿರುತ್ತದೆ. (2) ವೃತ್ತಗಳನ್ನು ನೀಲಿ ಅಥವಾ ಕಪ್ಪು ಬಾಲ್ ಪಾಯಿಂಟ್ ಪೆನ್ನಿನಿಂದ ಮಾತ್ರ ತುಂಬಬೇಕು. ಉತ್ತರವನ್ನು ತುಂಬಿದ ಮೇಲೆ ಬದಲಿಸಲು ಪ್ರಯತ್ನಿಸಬೇಡಿ. (3) ವೃತ್ತಗಳಲ್ಲಿರುವ ಸಂಖ್ಯೆಗಳು ಕಾಣದಂತೆ ವೃತ್ತವನ್ನು ಸಂಪೂರ್ಣವಾಗಿ ತುಂಬಬೇಕು (4) ಉತ್ತರ ಪತ್ರಿಕೆಯ ಮೇಲೆ ಯಾವುದೇ ರೀತಿಯ ಗುರುತು, ಗೀಟು ಅಥವಾ ಚುಕ್ಕೆಯಾಗಲೀ ಮಾಡಬಾರದು. (5) ಇದು ಕಾರ್ಬನ್ ರಹಿತ ಉತ್ತರ ಪತ್ರಿಕೆ. ಉತ್ತರ ಪತ್ರಿಕೆಯ ಎರಡನೇ ಪ್ರತಿಯನ್ನು ಪ್ರತ್ಯೇಕವಾಗಿ ತುಂಬುವ ಅಗತ್ಯ ಇಲ್ಲ.**

SEAL



www.inyatrust.com

# KANNADA VERSION

1. ಸ್ವೀಡನ್ ದೇಶದ ನಾಣ್ಯದ ಹೆಸರು

(1) ಕ್ರೋನ (2) ಫ್ರಾಂಕ್

(3) ಯೂರೊ (4) ಪೌಂಡ್

2. ಬಹುತೇಕ ಪ್ರಾಣಿಗಳು ಮರುಬರುವ ಬಹುದಿನಗಳ ಉಪಯೋಗಕ್ಕಾಗಿ ಆಹಾರ ಕಣವನ್ನು ಶೇಖರಿಸುವ ರೂಪ

(1) ಕೊಲೆಸ್ಟರಾಲ್ (2) ಗೈಕೊಜಿನ್

(3) ಪಿಷ್ಠ (4) ಕೊಬ್ಬು

3. ನಯಗಾರಾ ಜಲಪಾತ ಇರುವ ದೇಶ

(1) ಆಫ್ರಿಕಾ (2) ಕೆನಡಾ

(3) ಅಮೇರಿಕಾ (4) ನ್ಯೂಜಿಲೆಂಡ್

4. ಭೂಮಿಯ ವಾಯುಮಂಡಲದಲ್ಲಿ ಓಜೋನ್ ರಂಧ್ರವು ಉಂಟಾಗಿರುವ ಭೂಮಿಯ ಪದರ

(1) ಅತಿಶೀತಲ ಪದರ (Cryosphere)

(2) ಹವಾಗೋಲ (Troposphere)

(3) ಗಾಳಿಯ ಪದರ (Stratosphere)

(4) ಮಧ್ಯಗೋಲ (Mesosphere)

5. ಭಾರತದ ಈ ಭಾಗದಲ್ಲಿ ಚೋಳರ ಸಾಮ್ರಾಜ್ಯ ಅತಿ ದೊಡ್ಡದಾಗಿ ಹರಡಿತ್ತು

(1) ಮಧ್ಯ ಭಾರತ (2) ಪಶ್ಚಿಮ ಭಾರತ

(3) ದಕ್ಷಿಣ ಭಾರತ (4) ಉತ್ತರ ಭಾರತ

---

ಕಚ್ಚಾ ಕಾರ್ಯಕ್ಕಾಗಿ ಜಾಗ



www.inyatrust.com

**6.** 'ಜವಾಹರಲಾಲ್ ನೆಹರು ಪ್ರಶಸ್ತಿ' ಪುರಸ್ಕಾರಕ್ಕೆ ಪಾತ್ರರಾದ ಮೊಟ್ಟ ಮೊದಲನೆಯ ವ್ಯಕ್ತಿ

(1) ಜೂಲಿಯಸ್ ನೈರೇರೆ (2) ಉ ಥಾಂಟ್

(3) ಮದರ್ ತೆರೆಸಾ (4) ಮಾರ್ಟಿನ್ ಲೂಥರ್

**7.** ಅರವಿಂದ ಅಡಿಗರು ರಚಿಸಿದ 2008 ರ ಬುಕರ್ ಪ್ರಶಸ್ತಿ ಪಡೆದ ಕೃತಿ

(1) ದಿ ವೈಟ್ ಟೈಗರ್

(2) ದಿ ಗಾಡ್ ಆಫ್ ಸ್ಮಾಲ್ ಥಿಂಗ್ಸ್

(3) ಸೀ ಆಫ್ ಪಪ್ಪೀಸ್

(4) ಇನ್‌ಹೆರಿಟೆನ್ಸ್ ಆಫ್ ಲಾಸ್

**8.** ಅಮೇರಿಕಾ ಸಂಯುಕ್ತ ಸಂಸ್ಥಾನದ ಅಧ್ಯಕ್ಷ ಬರಾಕ್ ಒಬಾಮಾರವರ ರಾಜಕೀಯ ಪಕ್ಷದ ಹೆಸರು

(1) ಫೆಡರಾಲಿಸ್ಟ್ (2) ವ್ಹಿಗ್

(3) ರಿಪಬ್ಲಿಕ್ ಪಕ್ಷ (4) ಡೆಮಾಕ್ರೆಟಿಕ್

**9.** A(H1N1) ಸಾಂಕ್ರಾಮಿಕ ರೋಗ ಮೊದಲು ಕಾಣಿಸಿಕೊಂಡ ದೇಶ

(1) ಆಸ್ಟ್ರೇಲಿಯಾ (2) ಮೆಕ್ಸಿಕೊ

(3) ಅಮೇರಿಕಾ ಸಂಯುಕ್ತ ಸಂಸ್ಥಾನ (4) ಚೀನಾ

**10.** ಹೊಸದಾಗಿ ಆರಿಸಿ ಬಂದ ಭಾರತದ ಸರ್ಕಾರದಲ್ಲಿ ಗೃಹಖಾತೆ ಹೊಂದಿರುವ ಕೇಂದ್ರ ಮಂತ್ರಿ

(1) ಮಮತಾ ಬ್ಯಾನರ್ಜಿ (2) ಚಿದಂಬರಂ

(3) ಲಾಲು ಪ್ರಸಾದ ಯಾದವ (4) ಕಪಿಲ ಸಿಬಲ

**11.** 'ಕಾದಂಬರಿ' ಕೃತಿಯನ್ನು ರಚಿಸಿದವರು

(1) ಕಾಲಿದಾಸ (2) ಕುಮಾರ ವ್ಯಾಸ

(3) ಬಾಣ ಭಟ್ಟ (4) ರವೀಂದ್ರನಾಥ ಟಾಗೋರ್

ಕಚ್ಚಾ ಕಾರ್ಯಕ್ಕಾಗಿ ಜಾಗ



www.inyatrust.com

12. ಮಗುವಿನ ಬೆಳವಣಿಗೆಗೆ ಸಂಬಂಧಿಸಿದಂತೆ ಕೊಡುಗೆ ನೀಡಿದ ಮನೋವಿಜ್ಞಾನಿ

(1) ಜಾನ್ ಲಾಕ್ (2) ಲಿಂಡ್‌ಕ್ವಿಸ್ಟ್

(3) ಸಿಗ್ಮಂಡ್ ಫ್ರಾಯ್ಡ್ (4) ಆಲ್‌ಪೋರ್ಟ್

13. ಕಾಲದ ಜೊತೆ ಸ್ಥಳಾಂತರದ ವೇಗದ ದರವು

(1) ತಡಗೊಳಿಸುವ ಪ್ರಭಾವ (2) ವೇಗ

(3) ಚಲನೆಯ ಗತಿ (4) ವೇಗವರ್ಧನ

14. ಸೌರವ್ಯೂಹದಲ್ಲಿನ ಅತಿ ಪ್ರಜ್ವಲ ಗ್ರಹ

(1) ಗುರು (2) ಬುಧ

(3) ಶುಕ್ರ (4) ಪ್ಲೂಟೊ

15. 1974 ರಲ್ಲಿ ಔಷಧಿ (Medicine) ಗಾಗಿ ನೋಬೆಲ್ ಪ್ರಶಸ್ತಿ ಪಡೆದ ಜೀವ ವಿಜ್ಞಾನಿ

(1) ಹರ್ಮನ್ ಜೋಸೆಫ್ ಮುಲ್ಲರ್

(2) ಸರ್ ಮಾರ್ಟಿನ್ ಇವಾನ್ಸ್

(3) ಜೆಸ್ಸೆ ಪೋರ್ಟರ್

(4) ಜಾರ್ಜ್ ಎಮಿಲ್ ಪಾಲಡೆ

16. ಎಲೆಕ್ಟ್ರಿಕ್ ಹೀಟರ್‌ನಲ್ಲಿ ಬಳಸುವ ಮೂಲವಸ್ತು

(1) ಕಬ್ಬಿಣ (2) ನಿಕ್ರೋಮ್

(3) ಹಿತ್ತಾಳೆ (4) ತಾಮ್ರ

---

ಕಚ್ಚಾ ಕಾರ್ಯಕ್ಕಾಗಿ ಜಾಗ



www.inyatrust.com

17. ಆರ್. ಎಲ್. ಸ್ಟಿವನ್‌ಸನ್ ಬರೆದ ಪುಸ್ತಕ

(1) ಓಲ್ಡ್ ಮ್ಯಾನ್ ಅಂಡ್ ದಿ ಸೀ

(2) ಷೀ ಸ್ಟೂಪ್ಸ್ ಟು ಕಾಂಕರ್

(3) ಟ್ರೆಜರ್ ಐಲ್ಯಾಂಡ್

(4) ಟ್ವೆಲ್ಫ್ತ್ ನೈಟ್

18. ಕಾಜಿರಾಂಗ ರಾಷ್ಟ್ರೀಯ ಉದ್ಯಾನವನ ಇರುವ ರಾಜ್ಯ

(1) ಅಸ್ಸಾಂ | (2) ಉತ್ತರ ಪ್ರದೇಶ

(3) ಪಶ್ಚಿಮ ಬಂಗಾಲ | (4) ಮಿಜೊರಾಮ್

19. ಭೂಕಂಪನ ತೀಕ್ಷ್ಣತೆಯನ್ನು ಅಳೆಯುವ ಮಾಪನ ಯಂತ್ರ

(1) ಸೀಸ್ಮೊಗ್ರಾಫ್ | (2) ಸ್ಪೆಕ್ಟ್ರೊಗ್ರಾಫ್

(3) ಎಲೆಕ್ಟ್ರೊಗ್ರಾಫ್ | (4) ಆಸಿಲೋಸ್ಕೋಪ್

20. ಅಲೆಗ್ಸಾಂಡರ್ ಗ್ರಹಾಂ ಬೆಲ್ ಕಂಡುಹಿಡಿದದ್ದು

(1) ಟೆಲೆಫೋನ್ | (2) ವಿದ್ಯುಚ್ಛಕ್ತಿ

(3) ಟೆಲೆವಿಶನ್ | (4) ರೇಡಿಯೊ

21. ಮೂತ್ರಪಿಂಡದ ಮೇಲ್ಭಾಗದಲ್ಲಿರುವ ಗ್ರಂಥಿ

(1) ಥೈರಾಯಿಡ್ | (2) ಪಿಟ್ಯುಟರಿ

(3) ಮೇದೋಜ್ಜೀರಕ ಗ್ರಂಥಿ | (4) ಅಡ್ರಿನಲ್

ಕಚ್ಚಾ ಕಾರ್ಯಕ್ಕಾಗಿ ಜಾಗ



www.inyatrust.com

**22.** ಪ್ರಪಂಚದಲ್ಲಿ ಅತಿ ಉದ್ದವಾದ ಎರಡು ನದಿಗಳು

(1) ಗಂಗಾ ಮತ್ತು ಹಳದಿ ನದಿ

(2) ನೈಲ್ ಮತ್ತು ಅಮೆಜಾನ್

(3) ನೈಲ್ ಮತ್ತು ಗಂಗಾ

(4) ಅಮೆಜಾನ್ ಮತ್ತು ಮಿಸಿಸಿಪ್ಪಿ

**23.** ಫ್ರಾನ್ಸ್ ಸರ್ಕಾರ ಈಸ್ಟ್ ಇಂಡಿಯ ಕಂಪನಿಯನ್ನು ಸ್ಥಾಪಿಸಿದ ವರ್ಷ

(1) 1616 (2) 1664

(3) 1600 (4) 1610

1600
1602
1664

**24.** ಬೌದ್ಧ ಧರ್ಮವನ್ನು ಸ್ಥಾಪಿಸಿದವರು

(1) ಸಿದ್ಧಾರ್ಥ ಗೌತಮ (2) ನಾಮದೇವ

(3) ಹರ್ಷವರ್ಧನ (4) ಚಂದ್ರಗುಪ್ತ ಮೌರ್ಯ

**25.** ಜಂಬೀರ (citrus) ಹಣ್ಣುಗಳಲ್ಲಿ ಯಥೇಚ್ಛವಾಗಿ ಕಂಡುಬರುವ ಅನ್ನಾಂಗ

(1) ಅನ್ನಾಂಗ 'ಸಿ' (2) ಅನ್ನಾಂಗ 'ಡಿ'

(3) ಅನ್ನಾಂಗ 'ಎ' (4) ಅನ್ನಾಂಗ 'ಬಿ'

**26.** ಮಾವೋರಿ ಜನಾಂಗ ವಾಸಿಸುವ ದೇಶ

(1) ಮಾರಿಶಸ್ (2) ಶ್ರೀಲಂಕಾ

(3) ನ್ಯೂಜಿಲೆಂಡ್ (4) ದಕ್ಷಿಣ ಆಫ್ರಿಕಾ

**27.** ಯೂರಿಯದಲ್ಲಿರುವ ಸಾರಜನಕದ ಪ್ರಮಾಣ

(1) 26% (2) 56%

(3) 46 % (4) 36%

---

**ಕಚ್ಚಾ ಕಾರ್ಯಕ್ಕಾಗಿ ಜಾಗ**



**www.inyatrust.com**

**28.** ಡಿಸೆಂಬರ್ 10 ರಂದು ಇದನ್ನು ಆಚರಿಸುತ್ತಾರೆ

(1) ವಿಶ್ವ ರೆಡ್‌ಕ್ರಾಸ್ ದಿನ
(2) ಮಾನವ ಹಕ್ಕು ದಿನ
(3) ವಿಶ್ವಸಂಸ್ಥೆ ದಿನ
(4) ವಿಶ್ವ ಆರೋಗ್ಯ ದಿನ

**29.** ಕೆನಡಾ ದೇಶದ ರಾಜಧಾನಿ

(1) ಮೊಂಟ್ರಿಯಲ್
(2) ವ್ಯಾಂಕೂವರ್
(3) ಟೊರಂಟೊ
(4) ಒಟಾವಾ

**30.** ಡ್ಯೂರಾಂಡ್ ಕಪ್ ಈ ಕ್ರೀಡೆಗೆ ಸಂಬಂಧಿಸಿದೆ

(1) ಬಾಲ್ ಬ್ಯಾಡ್‌ಮಿಂಟನ್
(2) ಫುಟ್‌ಬಾಲ್
(3) ಕ್ರಿಕೆಟ್
(4) ಹಾಕಿ

**31.** ಭಾರತದ ಸರ್ವೋಚ್ಚ ನ್ಯಾಯಾಲಯಕ್ಕೆ ನ್ಯಾಯಾಧೀಶರನ್ನು ನೇಮಕ ಮಾಡುವವರು

(1) ಪ್ರಧಾನ ಮಂತ್ರಿ
(2) ಗೃಹ ಮಂತ್ರಿ
(3) ರಾಷ್ಟ್ರಪತಿ
(4) ಉಪರಾಷ್ಟ್ರಪತಿ

**32.** ಪ್ರಖ್ಯಾತ ಪಾಪ್ ಗಾಯಕಿ ಕೈಲಿ ಮಿನೋಗ್ ಈ ದೇಶದವಳು

(1) ನ್ಯೂಜಿಲೆಂಡ್
(2) ಅಮೇರಿಕಾ
(3) ಇಂಗ್ಲೆಂಡ್
(4) ಆಸ್ಟ್ರೇಲಿಯಾ

**33.** ಸ್ಟೀಲ್ ಬೆರಕೆಲೋಹದಲ್ಲಿ ಕಬ್ಬಿಣದ ಜೊತೆ ಇರುವ ಮತ್ತೊಂದು ಲೋಹ

(1) ಮ್ಯಾಂಗನೀಸ್
(2) ಕಾರ್ಬನ್
(3) ಕ್ರೋಮಿಯಂ
(4) ನಿಕೆಲ್

---

**ಕಚ್ಚಾ ಕಾರ್ಯಕ್ಕಾಗಿ ಜಾಗ**



**www.inyatrust.com**

**34.** ನೀವು ಆಯ್ಕೆ ಮಾಡಿಕೊಂಡ ಒಂದು ಕ್ಷೇತ್ರದಲ್ಲಿನ ಹೈಸ್ಕೂಲು ವಿದ್ಯಾರ್ಥಿಗಳ ಓದುವ ಆಸಕ್ತಿಗಳನ್ನು ಅಧ್ಯಯನ ಮಾಡಲು ನೀವು ಯಾವ ವಿಧಾನವನ್ನು ಆಯ್ಕೆ ಮಾಡಿಕೊಳ್ಳುವಿರಿ ?

(1) ಸಮೀಕ್ಷೆ (2) ಅವಲೋಕನ

(3) ವಿಕಾಸಾತ್ಮಕ (4) ಪ್ರಾಯೋಗಿಕ

**35.** ಈ ಮನೋವಿಜ್ಞಾನ ಶಾಖೆ ಮಾನವನ ವರ್ತನೆಯ ಮೂಲಭೂತ ನಿಯಮಗಳನ್ನು ಕಂಡುಹಿಡಿಯುವ ಉದ್ದೇಶವನ್ನು ಹೊಂದಿದೆ.

(1) ವಿಕಾಸ ಮನೋವಿಜ್ಞಾನ

(2) ಸಾಮಾನ್ಯ ಮನೋವಿಜ್ಞಾನ

(3) ಸಾಮಾಜಿಕ ಮನೋವಿಜ್ಞಾನ

(4) ಅಪಸಾಮಾನ್ಯ ಮನೋವಿಜ್ಞಾನ

**36.** ಹಸಿರು ದೀಪ ಉರಿದಾಗಲೆಲ್ಲಾ ಅದರ ಮೇಲೆ ಕುಟುಕಲು ಪಕ್ಷಿಯೊಂದಕ್ಕೆ ತರಬೇತಿ ನೀಡಲಾಗಿದೆ. ಈಗ ಅದಕ್ಕೆ 10 ನಿಮಿಷಗಳಿಗೆ ಒಮ್ಮೆ ಪುನರ್ಬಲನ ನೀಡಲಾಗುತ್ತದೆ. ಪುನರ್ಬಲನದ ಈ ರೀತಿಯ ತಪಸೀಲನ್ನು _______ ತಪಸೀಲು ಎನ್ನಲಾಗುತ್ತದೆ.

(1) ಸಾವಧಿ (2) ವ್ಯತ್ಯಸ್ತ

(3) ಸತತ (4) ಅನುಪಾತೀಯ

**37.** ಒಬ್ಬ ವ್ಯಕ್ತಿ ಒಂದು ಗುರಿಯ ಕಡೆಗೆ ಮುಂದುವರಿಯುತ್ತಿರುವಾಗ ಅಡಚಣೆಯೊಂದು ಅಡ್ಡಿ ಪಡಿಸುತ್ತದೆ. ಆಗ ಆ ವ್ಯಕ್ತಿಯ ಅನುಭವದ ಮನಃಸ್ಥಿತಿಗೆ _________ ಎಂದು ಹೇಳುತ್ತೇವೆ.

(1) ಭಗ್ನ ಮನೋರಥ (ಆಶಾಭಂಗ) (2) ದ್ವಂದ್ವ

(3) ಉದ್ವೇಗ (4) ಒತ್ತಡ

---

ಕಚ್ಚಾ ಕಾರ್ಯಕ್ಕಾಗಿ ಜಾಗ



www.inyatrust.com

**38.** ಕಂಠಪಾಠಮಾಡಿಕೊಳ್ಳುವ ಪ್ರಕಿಯೆಯಲ್ಲಿನ ಮೊದಲ ಹಂತ ಯಾವುದು ?

(1) ಪುನಃಸ್ಮರಣೆ (2) ಕಲಿಯುವಿಕೆ

(3) ಗುರ್ತಿಸುವಿಕೆ (4) ಧಾರಣ

**39.** ಈ ಕೆಳಗಿನವುಗಳಲ್ಲಿ ಯಾವುದು ಆಂತರಿಕ ಅಭಿಪ್ರೇರಣೆಯ ಉದಾಹರಣೆಯಾಗಿದೆ ?

(1) ಕಲೆ ಒಂದರಲ್ಲಿ ಪ್ರಭುತ್ವ ಪಡೆಯಲು ಪ್ರಯತ್ನಿಸುವುದು.

(2) ಹೆಚ್ಚು ಹಣ ಸಂಪಾದಿಸಲು ಕಷ್ಟಪಟ್ಟು ಕೆಲಸ ಮಾಡುವುದು.

(3) ಒಂದು ನಿರ್ದಿಷ್ಟ ಬಹುಮಾನ ಪಡೆಯಲು ಪ್ರಯತ್ನಿಸುವುದು.

(4) ಸಾಮಾಜಿಕ ಮನ್ನಣೆಗಾಗಿ ಕೆಲಸ ಮಾಡುವುದು.

**40.** ಸಾಮಾಜಿಕವಾಗಿ ಒಪ್ಪಿತವಾಗುವ ದಿಶೆಯಲ್ಲಿ ತನ್ನ ಸಂವೇಗಗಳನ್ನು ಮತ್ತು ಉದ್ವೇಗಗಳನ್ನು ಅಭಿವ್ಯಕ್ತಗೊಳಿಸುವ ತಂತ್ರಕ್ಕೆ ________ಎನ್ನುತ್ತಾರೆ.

(1) ಪ್ರಕ್ಷೇಪಣೆ (2) ಕ್ಷತಿಪೂರ್ತಿ

(3) ಸಯುಕ್ತಿಕೀಕರಣ (4) ಉದಾತ್ತೀಕರಣ

**41.** ಸಮಾಜಮಿತಿ ತಂತ್ರವನ್ನು ರೂಪಿಸಿದ ವ್ಯಕ್ತಿ -

(1) ಜೆ. ಎಲ್. ಮೊರೇನೊ (2) ಸ್ಟೀಫನ್ ಕೋರೆ

(3) ಕುರ್ಟ್ ಲೆವಿನ್ (4) ಅಲೆಕ್ಸ್ ಆಸ್‌ಬರ್ನ್

**42.** ಭೌತಶಾಸ್ತ್ರ ಪರೀಕ್ಷೆಯಲ್ಲಿ ಹೆಚ್ಚು ಅಂಕಗಳನ್ನು ಪಡೆಯುವ ವಿದ್ಯಾರ್ಥಿಗಳು, ಗಣಿತ ಪರೀಕ್ಷೆಯಲ್ಲೂ ಹೆಚ್ಚು ಅಂಕಗಳನ್ನು ಪಡೆಯುವ ಸಾಧ್ಯತೆ ಇದೆಯೆ ಎಂದು ತಿಳಿದುಕೊಳ್ಳಲು ನೀವು ಈ ಕೆಳಗಿನ ಸಂಖ್ಯಾಶಾಸ್ತ್ರೀಯ ವಿಧಾನಗಳಲ್ಲಿ ಯಾವುದನ್ನು ಅನುಸರಿಸುವಿರಿ ?

(1) ಚತುರ್ಥಕ ವಿಚಲನ (2) ಸರಾಸರಿ ವಿಚಲನ

(3) ಮಾನಕ ವಿಚಲನ (4) ಸಹಸಂಬಂಧ ಗುಣಾಂಕ

---

ಕಚ್ಚಾ ಕಾರ್ಯಕ್ಕಾಗಿ ಜಾಗ



www.inyatrust.com

**43.** ಜೆ.ಬಿ. ವಾಟ್ಸನ್ ಒಬ್ಬ ಸುಪ್ರಸಿದ್ಧ _________ ಮನೋವಿಜ್ಞಾನಿ.

(1) ಸಂಜ್ಞಾನಾತ್ಮಕವಾದಿ (2) ವರ್ತನವಾದಿ

(3) ಮನೋವಿಶ್ಲೇಷಣವಾದಿ (4) ಮಾನವತಾವಾದಿ

**44.** ಬೆಳವಣಿಗೆ ಮತ್ತು ವಿಕಾಸದ ಬಗ್ಗೆಯ ಈ ಕೆಳಗಿನ ಹೇಳಿಕೆಗಳಲ್ಲಿ ಯಾವುದು ಸರಿಯಾದುದು ?

(1) ವಿಕಾಸ ಬೆಳವಣಿಗೆಯನ್ನು ಒಳಗೊಂಡಿದೆ.

(2) ಬೆಳವಣಿಗೆ ಮತ್ತು ವಿಕಾಸ ಜೀವನ ಪರ್ಯಂತ ಒಂದೇ ವೇಗದಲ್ಲಿ ಮುಂದುವರಿಯುತ್ತವೆ.

(3) ಬೆಳವಣಿಗೆ ಮತ್ತು ವಿಕಾಸ ಒಂದೇ ಅರ್ಥವನ್ನು ಹೊಂದಿವೆ.

(4) ಬೆಳವಣಿಗೆ ವಿಕಾಸವನ್ನು ಒಳಗೊಂಡಿದೆ.

**45.** ಅವಲೋಕನಾತ್ಮಕ ಕಲಿಕೆಯಲ್ಲಿ ಮಹತ್ವ ನೀಡಲಾಗುವ ಪರಿಕಲ್ಪನೆ

(1) ನಮೂನೀಕರಣ (2) ಸಂರಚಿಸುವಿಕೆ

(3) ಒಳನೋಟ (4) ಸಾಮೀಪ್ಯ

**46.** ಆಟಿಕೆಯೊಂದನ್ನು ಮಗುವಿಗೆ ತೋರಿಸಿ ಅದು ನೋಡುತ್ತಿದ್ದಂತೆಯೆ ಆಟಿಕೆಯನ್ನು ಚಾಪೆಯ ಅಡಿಯಲ್ಲಿ ಬಚ್ಚಿಡಲಾಗಿದೆ. ಆಗ ಆ ಮಗು ಚಾಪೆಯ ಕಡೆಗೆ ತೋರಿಸಿ ಆಟಿಕೆಯನ್ನು ಪಡೆಯಲು ಬಯಸುತ್ತದೆ. ಈ ರೀತಿಯ ಸಂಜ್ಞಾನಾತ್ಮಕ ಕ್ರಿಯೆ _________ ಕಾಣಿಸಿಕೊಳ್ಳುತ್ತದೆ.

(1) ಗತಿ-ಸಂವೇದನಾತ್ಮಕ ಹಂತದ ಕೊನೆಯಲ್ಲಿ

(2) ಮೂರ್ತ ಸಂಕ್ರಿಯಾತ್ಮಕ ಹಂತದ ಆರಂಭದಲ್ಲಿ

(3) ಗತಿ-ಸಂವೇದನಾತ್ಮಕ ಹಂತದ ಆರಂಭದಲ್ಲಿ

(4) ಪೂರ್ವ-ಸಂಕ್ರಿಯಾತ್ಮಕ ಹಂತದ ಕೊನೆಯಲ್ಲಿ

---

ಕಚ್ಚಾ ಕಾರ್ಯಕ್ಕಾಗಿ ಜಾಗ



www.inyatrust.com

47. ಕೆಲವು ಲಕ್ಷಣಗಳಲ್ಲಿ ಸಮಾನತೆ ಇದ್ದು, ಇನ್ನು ಕೆಲವು ಲಕ್ಷಣಗಳಲ್ಲಿ ವ್ಯತ್ಯಾಸ ಹೊಂದಿರುವ ವಸ್ತುಗಳ ಅಥವಾ ವಿಚಾರಗಳ ಗುಂಪನ್ನು ಪ್ರತಿನಿಧಿಸುವ ಶಾಬ್ದಿಕ ಅಥವಾ ಅಶಾಬ್ದಿಕ ಸಂಕೇತಕ್ಕೆ __________ ಎಂದು ಹೆಸರು.

(1) ನಿಯಮ (ತತ್ವ) (2) ವಿಭೇದೀಕರಣ

(3) ಸಾಮಾನ್ಯೀಕರಣ (4) ಪರಿಕಲ್ಪನೆ

48. ಆರಂಭದಲ್ಲಿ ಮನೋವಿಜ್ಞಾನದ ಗುರಿ ________ ಅನ್ನು ಅಧ್ಯಯನ ಮಾಡುವುದೆಂದು ಪರಿಗಣಿಸಲಾಗಿತ್ತು.

(1) ಆತ್ಮವಿಚಾರ (2) ವರ್ತನೆ

(3) ಪ್ರಜ್ಞೆ (4) ಮನಸ್ಸು

49. ಯಾವ ಹೇಳಿಕೆ ಅಭಿವೃತ್ತಿ (ಮನೋಭಾವ) ಗಳ ಸ್ವರೂಪಕ್ಕೆ ಅನ್ವಯಿಸುವುದಿಲ್ಲ ?

(1) ಮನೋಭಾವಗಳು ತಮ್ಮ ತೀವ್ರತೆಯಲ್ಲಿ ವ್ಯತ್ಯಾಸಹೊಂದುತ್ತವೆ.

(2) ಮನೋಭಾವಗಳು ಜೈವಿಕ ಅಂಶಗಳಿಂದ ಪ್ರಭಾವಿತಗೊಳ್ಳುತ್ತವೆ.

(3) ಮನೋಭಾವಗಳು ಧನಾತ್ಮಕ ಅಥವಾ ಋಣಾತ್ಮಕವಾಗಿರುತ್ತವೆ.

(4) ಮನೋಭಾವಗಳು ಸಂವೇಗಾತ್ಮಕ ಅನುಭವವನ್ನುಂಟುಮಾಡುತ್ತವೆ.

50. ಅರ್ಥಪೂರ್ಣ ಸ್ವೀಕೃತಿ ಕಲಿಕೆಯನ್ನು ವಿವರಿಸಿದವರು

(1) ಬ್ರೂನರ್ (2) ಆಸುಬೆಲ್

(3) ಪ್ಯಾವ್‌ಲೋವ್ (4) ಕೋಹ್ಲರ್

51. ಯಾವ ಉಪಕ್ರಮದಲ್ಲಿ ವ್ಯಕ್ತಿತ್ವಗಳನ್ನು ನಿರ್ದಿಷ್ಟ ಲಕ್ಷಣಗಳ ಆಧಾರದ ಮೇಲೆ ವರ್ಗೀಕರಿಸಲು ಪ್ರಯತ್ನಿಸಲಾಗುತ್ತದೆ ?

(1) ಆಯಾಮ ಉಪಕ್ರಮ (2) ಮನೋವಿಶ್ಲೇಷಣ ಉಪಕ್ರಮ

(3) ವಿಶೇಷಕ ಉಪಕ್ರಮ (4) ಪ್ರರೂಪ ಉಪಕ್ರಮ

ಕಚ್ಚಾ ಕಾರ್ಯಕ್ಕಾಗಿ ಜಾಗ



www.inyatrust.com

**52.** ವಯಸ್ಕರ ಸಂವೇಗಾತ್ಮಕ ಸಮಸ್ಯೆಗಳನ್ನು ಮೌಲ್ಯಮಾಪನ ಮಾಡಲು ಸೂಕ್ತವಾದ ಸಾಧನ _________.

(1) RPM
(2) CAT
(3) TAT
(4) DAT

**53.** ಸಮಾಜ ಆಲೇಖ ಎಂದರೆ _________.

(1) ಒಂದು ಗುಂಪಿನಲ್ಲಿನ ಪಾರಸ್ಪರಿಕ ಸಾಮಾಜಿಕ ಆದ್ಯತೆಗಳ ಚಿತ್ರಾತ್ಮಕ ಪ್ರತಿನಿಧೀಕರಣ

(2) ಗುಂಪು ಒಂದರ ಸಾಮಾಜಿಕ ಸಂರಚನೆಯ ಅಧ್ಯಯನ.

(3) ಒಂದು ಗುಂಪಿನಲ್ಲಿನ ಸಾಮಾಜಿಕ ಸಂಬಂಧಗಳ ವಿನ್ಯಾಸದ ವಿಶ್ಲೇಷಣೆ

(4) ಪಾರಸ್ಪರಿಕ ಸಾಮಾಜಿಕ ಆದ್ಯತೆಗಳ ಅಳತೆ

**54.** ವಿಕೇಂದ್ರೀಕೃತ ಯೋಚನಾ ಸಾಮರ್ಥ್ಯವೆಂದರೆ _______.

(1) ವಿಭಿನ್ನ ದಿಶೆಗಳಲ್ಲಿ ಯೋಚಿಸುವುದು.

(2) ಯೋಚನಾ ರೀತಿಯನ್ನು ಬೇಗ ಬದಲಿಸಿಕೊಳ್ಳುವುದು.

(3) ಒಂದೇ ದಿಶೆಯಲ್ಲಿ ಯೋಚಿಸುವುದು.

(4) ಮೌಲಿಕ ರೀತಿಯಲ್ಲಿ ಯೋಚಿಸುವುದು.

**55.** ಮಾನವನ ಅಗತ್ಯಗಳ ಶ್ರೇಣೀಬದ್ಧ ಮಾದರಿಯನ್ನು ವಿವರಿಸಿರುವ ಮನೋವಿಜ್ಞಾನಿ _________.

(1) ಅಬ್ರಹಾಮ್ ಮ್ಯಾಸ್ಲೋ

(2) ಎರಿಕ್ ಎರಿಕ್‌ಸನ್

(3) ಸಿಗ್ಮಂಡ್ ಫ್ರಾಯ್ಡ್

(4) ಕಾರ್ಲ್ ರೋಜರ್ಸ್

---

**ಕಚ್ಚಾ ಕಾರ್ಯಕ್ಕಾಗಿ ಜಾಗ**



**www.inyatrust.com**

**56.** ಈ ಕೆಳಗಿನವುಗಳಲ್ಲಿ ಯಾವುದು ಮಕ್ಕಳ ಸಂವೇಗಗಳ ಲಕ್ಷಣವಲ್ಲ ?

(1) ಅವು ತಮ್ಮ ಪ್ರಬಲತೆಯಲ್ಲಿ ಬೇಗ ಬದಲಾವಣೆ ಹೊಂದುತ್ತವೆ.

(2) ಅವು ಆಗಾಗ್ಗೆ ಕಾಣಿಸಿಕೊಳ್ಳುತ್ತವೆ.

(3) ಅವು ತೀವ್ರವಾಗಿರುತ್ತವೆ.

(4) ಅವು ದೀರ್ಘಕಾಲದ ವರೆಗೆ ಉಳಿದಿರುತ್ತವೆ.

**57.** ಆನುವಂಶೀಯತೆಯ ತಂತ್ರವೆಂದರೆ

(1) ಮುಂದಿನ ಪೀಳಿಗೆಗೆ ಸಂಸ್ಕೃತಿಯನ್ನು ವರ್ಗಾಯಿಸುವುದು.

(2) ಮುಂದಿನ ಪೀಳಿಗೆಗೆ ಆರ್ಜಿತ ಲಕ್ಷಣಗಳನ್ನು ರವಾನಿಸುವುದು.

(3) ಮುಂದಿನ ಸಂತಾನಕ್ಕೆ ಸಾಮಾಜಿಕ ಲಕ್ಷಣಗಳನ್ನು ರವಾನಿಸುವುದು.

(4) ಮುಂದಿನ ಸಂತಾನಕ್ಕೆ ಲಕ್ಷಣಗಳನ್ನು ಜೈವಿಕ ರೀತಿಯಲ್ಲಿ ವರ್ಗಾಯಿಸುವುದು.

**58.** ಮನೋವಿಜ್ಞಾನವನ್ನು ಪ್ರಜ್ಞೆಯ ವಿಜ್ಞಾನ ಎಂದು ಪರಿಭಾಷಿಸಿದ ಮನೋವಿಜ್ಞಾನಿ __________.

(1) ಉಲ್ಫ್‌ಗ್ಯಾಂಗ್ ಕೋಹ್ಲರ್

(2) ಜೆ. ಬಿ. ವಾಟ್ಸನ್

(3) ಬಿ.ಎಫ್. ಸ್ಕಿನ್ನರ್

(4) ವಿಲ್‌ಹೆಲ್ಮ್ ವುಂಟ್

**59.** ಸ್ಟ್ಯಾನ್‌ಫರ್ಡ್-ಬೀನೆ ಬುದ್ಧಿಶಕ್ತಿ ಪರೀಕ್ಷಣ __________ಕ್ಕೆ ಉದಾಹರಣೆಯಾಗಿದೆ.

(1) ಸಮೂಹ ಪರೀಕ್ಷಣ

(2) ಅಶಾಬ್ದಿಕ ಸಮೂಹ ಪರೀಕ್ಷಣ

(3) ಅಶಾಬ್ದಿಕ ಪರೀಕ್ಷಣ

(4) ಶಾಬ್ದಿಕ-ವ್ಯಕ್ತಿಗತ ಪರೀಕ್ಷಣ

---

ಕಚ್ಚಾ ಕಾರ್ಯಕ್ಕಾಗಿ ಜಾಗ



www.inyatrust.com

**60.** ಅನೇಕ ಚರಾಂಶಗಳ ಅಥವಾ ಕಾರಕಗಳ ನಡುವಣ ಅನ್ಯೋನ್ಯಕ್ರಿಯೆಯನ್ನು ಅಧ್ಯಯನ ಮಾಡಲು ಸೂಕ್ತವಾದ ವಿಧಾನ ________.

(1) ಕ್ಷೇತ್ರ ಸಮೀಕ್ಷೆ (2) ಅವಲೋಕನ

(3) ವ್ಯಕ್ತಿ ಅಧ್ಯಯನ (4) ಪ್ರಯೋಗ

**61.** ದೈಹಿಕ ವಿಕಾಸ ಅತ್ಯಂತ ವೇಗವಾಗಿ ಆಗುವುದು ________ ಅವಧಿಯಲ್ಲಿ.

(1) ಜನ್ಮ ಪೂರ್ವ (2) ತಾರುಣ್ಯ

(3) ಶೈಶವ (4) ಆರಂಭಿಕ ಬಾಲ್ಯ

**62.** "ಉದ್ದೇಶಪೂರ್ವಕವಾಗಿ ವರ್ತಿಸಲು, ತರ್ಕಬದ್ಧವಾಗಿ ಯೋಚಿಸಲು ಮತ್ತು ತನ್ನ ಪರಿಸರದೊಂದಿಗೆ ಪ್ರಭಾವಯುತವಾಗಿ ವ್ಯವಹರಿಸಲು ಬೇಕಾದ ವ್ಯಕ್ತಿಯ ಸಮಗ್ರವಾದ ಸಾಮರ್ಥ್ಯವೇ ಬುದ್ಧಿಶಕ್ತಿ." ಬುದ್ಧಿಶಕ್ತಿಯ ಈ ಪರಿಭಾಷೆಯನ್ನು ನೀಡಿರುವ ಮನೋವಿಜ್ಞಾನಿ ________.

(1) ವೆಕ್ಸ್‌ಲರ್ (2) ಬೀನೆ

(3) ಸ್ಪಿಯರ್‌ಮನ್ (4) ಥರ್ಸ್ಟನ್

**63.** ಕಲಿಕೆಯ ವ್ಯಾಪಕವಾದ ಪರಿಭಾಷೆ (ವ್ಯಾಖ್ಯೆ) ________.

(1) ಪರಿಪಕ್ವನದ ಪರಿಣಾಮವಾಗಿ ಉಂಟಾಗುವ ವರ್ತನೆಯ ಬದಲಾವಣೆ

(2) ಅಪೇಕ್ಷಿತ ದಿಶೆಯಲ್ಲಿ ಆಗುವ ವರ್ತನೆಯ ಬದಲಾವಣೆ

(3) ವರ್ತನೆಯ ಬದಲಾವಣೆ

(4) ಪೂರ್ವಾನುಭವ ಮತ್ತು ತರಬೇತಿಯ ನಂತರ ಫಲಿತವಾಗುವ ವರ್ತನೆಯ ಬದಲಾವಣೆ

---

ಕಚ್ಚಾ ಕಾರ್ಯಕ್ಕಾಗಿ ಜಾಗ



www.inyatrust.com

**64.** ಮನಸ್ಸಿನ ಗಹನವಾದ ಅಭಿಪ್ರೇರಣಾತ್ಮಕ ಶಕ್ತಿಗಳ ಅಧ್ಯಯನಕ್ಕೆ ಮಹತ್ವ ನೀಡುವ ಮನೋವಿಜ್ಞಾನ ಪಂಥಕ್ಕೆ __________ ಪಂಥ ಎನ್ನುತ್ತಾರೆ.

(1) ಮನೋವಿಶ್ಲೇಷಣವಾದಿ
(2) ಮಾನವತಾವಾದಿ
(3) ವರ್ತನವಾದಿ
(4) ಗೆಸ್ಟಾಲ್ಟ್

**65.** ಸಾಮಾಜೀಕರಣದ ಮುಖ್ಯ ಗುರಿ __________.

(1) ದೈಹಿಕ ಲಕ್ಷಣಗಳನ್ನು ಬೆಳೆಸುವುದು.
(2) ಸಾಮಾಜಿಕ ತರಬೇತಿಯ ಮೂಲಕ ಮಗುವಿನ ಲಕ್ಷಣಗಳನ್ನು ಮತ್ತು ವರ್ತನೆಯನ್ನು ರೂಪಿಸುವುದು.
(3) ಭಾಷೆಯನ್ನು ವಿಕಾಸಗೊಳಿಸುವುದು.
(4) ಸಂವೇಗಾತ್ಮಕ ಅಭಿವ್ಯಕ್ತಿಯನ್ನು ಮತ್ತು ನಿಯಂತ್ರಣವನ್ನು ಕಲಿಸುವುದು.

**66.** ನಿಗದಿಪಡಿಸಿದ ಸಮಯದ ಅವಧಿಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ವಿಚಾರಗಳನ್ನು ವೇಗವಾಗಿ ಹುಟ್ಟಿಸುವ ಸಾಮರ್ಥ್ಯವೇ __________.

(1) ವಿಸ್ತೃತಗೊಳಿಸುವಿಕೆ
(2) ನಮ್ಯತೆ
(3) ಮೌಲಿಕತೆ (originality)
(4) ನಿರರ್ಗಳತೆ (ಪಟುತ್ವ)

**67.** ಪ್ರಾಯೋಗಿಕ ಅಳಿವಿನ ತತ್ವ __________ ಕಲಿಕೆಯ ಒಂದು ತತ್ವವಾಗಿದೆ.

(1) ಅನುಕರಣ
(2) ಸಾಮಾಜಿಕ
(3) ಅನುಬಂಧನ (ಸೋಪಾಧಿಕ)
(4) ಅಂತರ್ದೃಷ್ಟಿ (ಒಳನೋಟ)

ಕಚ್ಚಾ ಕಾರ್ಯಕ್ಕಾಗಿ ಜಾಗ



www.inyatrust.com

**68.** ಕೊಟ್ಟಿರುವ ಆಯ್ಕೆಗಳಲ್ಲಿ ಸೂಕ್ತವಾದುದನ್ನು ಆಯ್ದು ಸಾಮ್ಯತೆಯನ್ನು ಪೂರ್ಣಗೊಳಿಸಿ.

$\frac{2}{5} : \frac{27}{16} :: ? : \frac{64}{9}$

(1) $\frac{3}{4}$ (2) $\frac{2}{3}$

(3) $\frac{4}{3}$ (4) $\frac{8}{3}$

**69.** ಆಯತದಲ್ಲಿ ಬಿಟ್ಟು ಹೋಗಿರುವ ಸಂಖ್ಯೆಯನ್ನು ಕಂಡು ಹಿಡಿಯಿರಿ :

| | | |
|---|---|---|
| 8 | 8 | 20 |
| 10 | 9 | 23 |
| 12 | 11 | ? |

(1) 25 (2) 24

(3) 28 (4) 26

ಲಂಬಸಾಲು II ರಲ್ಲಿ I ನೇ ಲಂಬಸಾಲಿನ ಪದಗಳ ಸಂಕೇತಗಳನ್ನು ಕೊಟ್ಟಿದೆ. ಈ ಸಂಕೇತಗಳು I ನೇ ಲಂಬಸಾಲಿನ ಪದಗಳ ಅಕ್ಷರಗಳಿಗೆ ಅನುಕ್ರಮವಾಗಿಲ್ಲ. ಪ್ರಶ್ನೆ **70** ಮತ್ತು **71** ರಲ್ಲಿನ ಪದಗಳ ಸಂಕೇತಗಳನ್ನು ಕಂಡುಹಿಡಿಯಿರಿ.

| **Col.-I** (ಪದಗಳು) | **Col.-II** (ಸಂಕೇತಗಳು) |
|---|---|
| 1. A B L E | 1. f m q *l* |
| 2. R A I L | 2. q s m g |
| 3. R O C K | 3. v t k g |
| 4. L O V E | 4. q *l* x y |

**70.** ROLE ಎಂಬ ಪದದ ಸಂಕೇತ ಯಾವುದು ?

(1) g v q *l* (2) q *l* v g

(3) *l* q v g (4) g q *l* v

ಕಚ್ಚಾ ಕಾರ್ಯಕ್ಕಾಗಿ ಜಾಗ



www.inyatrust.com

71. REAL ಎಂಬ ಪದದ ಸಂಕೇತವನ್ನು ಗುರ್ತಿಸಿ.

(1) g *l* m q (2) q m *l* g


(3) *l* g q m (4) *l* m q g

72. ಈ ಕೆಳಗಿನ ಪ್ರಶ್ನೆಯಲ್ಲಿ ಕೊಟ್ಟಿರುವ ಪರ್ಯಾಯಗಳಲ್ಲಿ ಅಕ್ಷರಗಳು ಪಕ್ಕದ ಅಕ್ಷರಕ್ಕಿಂತ ಒಂದು ಅಕ್ಷರ ಹೆಚ್ಚಾಗುತ್ತಾ ಹೋಗಿವೆ. ಪರ್ಯಾಯಗಳಲ್ಲಿ ಯಾವುದು ಈ ನಿಯಮವನ್ನು ಪಾಲಿಸಿದೆ ?

(1) W Y A C E G I (2) V Y B E H K N

(3) P U Z E J O T (4) U W Z D I O V

ಕೆಳಗೆ ಕೊಟ್ಟಿರುವ ಛೇದಾಕೃತಿಯಲ್ಲಿನ ಬೇರೆಬೇರೆ ಜಾಗಗಳನ್ನು 1 ರಿಂದ 12 ರ ವರೆಗಿನ ಸಂಖ್ಯೆಗಳಿಂದ ಗುರ್ತಿಸಲಾಗಿದೆ. ಈ ಆಕೃತಿಗಳನ್ನು ಜಾಗರೂಕತೆಯಿಂದ ವೀಕ್ಷಿಸಿ 73 ಮತ್ತು 74 ನೆಯ ಪ್ರಶ್ನೆಗಳನ್ನು ಉತ್ತರಿಸಿ.




73. ಯಾವ ಸಂಖ್ಯೆಯುಳ್ಳ ಜಾಗವು ಪ್ರಾಮಾಣಿಕರಲ್ಲದ, ಪಟ್ಟಣದ, ಕಷ್ಟಪಟ್ಟು ಕೆಲಸ ಮಾಡುವ, ವಿದ್ಯಾವಂತರನ್ನು ಸೂಚಿಸುತ್ತದೆ ?

(1) 6 (2) 9

(3) 2 (4) 3

ಕಚ್ಚಾ ಕಾರ್ಯಕ್ಕಾಗಿ ಜಾಗ




www.inyatrust.com

74. ಯಾವ ಸಂಖ್ಯೆಯುಳ್ಳ ಜಾಗವು ವಿದ್ಯಾವಂತರು, ಗ್ರಾಮಿಣ ಪ್ರದೇಶದವರು, ಕಷ್ಟಪಟ್ಟು ಕೆಲಸ ಮಾಡುವವರು ಹಾಗೂ ಪ್ರಾಮಾಣಿಕರನ್ನು ಸೂಚಿಸುತ್ತದೆ ?

(1) 10
(2) 9
(3) 12
(4) 11

75. ಕೊಟ್ಟಿರುವ ಚಿತ್ರವನ್ನು ಒಂದು ಘನವನ್ನಾಗಿ ಮಾಡಲು ಮಡಿಚಿದಾಗ ಅದು 1, 2, 3 ಮತ್ತು 4 ಎಂದು ಗುರುತಿಸಲಾಗಿರುವ ಯಾವುದಾದರೂ ಒಂದು ಘನದಂತೆ ಕಾಣಿಸಬಹುದು. ಚಿತ್ರದಿಂದ ಯಾವ ಘನ/ಘನಗಳನ್ನು ಮಾಡಬಹುದು ಎಂಬುದನ್ನು ಕಂಡುಹಿಡಿಯಿರಿ.




(1) 3 ಮತ್ತು 4
(2) 2 ಮಾತ್ರ
(3) 1 ಮತ್ತು 4
(4) 1 ಮಾತ್ರ

76. + ಅಂದರೆ ÷, × ಅಂದರೆ +, – ಅಂದರೆ × ಮತ್ತು ÷ ಅಂದರೆ – ಆದರೆ ಇವುಗಳಲ್ಲಿ ಸರಿಯಾದ ಸಮೀಕರಣ ಯಾವುದು?

(1) $36 + 6 - 3 \times 5 \div 3 = 24$
(2) $36 - 6 + 3 \times 5 \div 3 = 74$
(3) $36 \times 6 + 7 \div 2 - 6 = 20$
(4) $36 \div 6 + 3 \times 5 - 3 = 45$

77. ಒಂದು ಸಂಕೇತದ ಪ್ರಕಾರ BIOLOGY ಯನ್ನು OVBYBTL ಎಂದು ಬರೆದರೆ ಅದೇ ಸಂಕೇತದ ಪ್ರಕಾರ PHYSICS ನ್ನು ಹೇಗೆ ಬರೆಯಬಹುದು ?

(1) DULFVPE
(2) CULEUQF
(3) CULEVPE
(4) CULFVPF

ಕಚ್ಚಾ ಕಾರ್ಯಕ್ಕಾಗಿ ಜಾಗ



www.inyatrust.com

78. ಇವುಗಳಲ್ಲಿ ಗುಂಪಿಗೆ ಸೇರದೆ ಇರುವುದನ್ನು ಕಂಡು ಹಿಡಿಯಿರಿ.

(1) 125 (2) 27


(3) 512 (4) 343

79. ಒಬ್ಬ ತಂದೆಯ ವಯಸ್ಸು ಅವನ ಮೂರು ಮಕ್ಕಳ ಒಟ್ಟು ವಯಸ್ಸಿನ ನಾಲ್ಕರಷ್ಟಿದೆ. ಆದರೆ ಎಂಟು ವರ್ಷಗಳನಂತರ ಅವನ ವಯಸ್ಸು ಮಕ್ಕಳ ಒಟ್ಟು ವಯಸ್ಸಿನ ಎರಡರಷ್ಟು ಆದರೆ, ತಂದೆಯ ವಯಸ್ಸು :

(1) 80 ವರ್ಷಗಳು (2) 84 ವರ್ಷಗಳು

(3) 72 ವರ್ಷಗಳು (4) 76 ವರ್ಷಗಳು

80. ಈ ಆಕೃತಿಯಲ್ಲಿ ಬಿಟ್ಟು ಹೋಗಿರುವ ಸಂಖ್ಯೆಯನ್ನು ಕಂಡು ಹಿಡಿಯಿರಿ:




(1) 64 (2) 25

(3) 225 (4) 125

ಪ್ರಶ್ನೆ **81** ಮತ್ತು **82** ಕೆಳಗೆ ಕೊಟ್ಟಿರುವ ಮಾಹಿತಿಯನ್ನು ಆಧರಿಸಿವೆ :

1. A ಯು ಇತಿಹಾಸ, ಕನ್ನಡ ಮತ್ತು ಜೀವಶಾಸ್ತ್ರವನ್ನು ಅಭ್ಯಾಸಮಾಡುತ್ತಾನೆ.
2. B ಮತ್ತು C ಅರ್ಥಶಾಸ್ತ್ರ ಮತ್ತು ಸಮಾಜಶಾಸ್ತ್ರವನ್ನು ಅಭ್ಯಾಸಮಾಡುತ್ತಾರೆ.
3. D ಮತ್ತು A ಪ್ರಾಣಿಶಾಸ್ತ್ರ ಮತ್ತು ಸಂಸ್ಕೃತವನ್ನು ಅಭ್ಯಾಸಮಾಡುತ್ತಾರೆ.
4. E ಮತ್ತು B ಹಿಂದಿ ಮತ್ತು ಕನ್ನಡವನ್ನು ಅಭ್ಯಾಸಮಾಡುತ್ತಾರೆ.

81. ಈ ವಿದ್ಯಾರ್ಥಿಗಳಲ್ಲಿ ಅತಿ ಹೆಚ್ಚು ವಿಷಯಗಳನ್ನು ಅಭ್ಯಾಸಮಾಡುವವರು ಯಾರು ?

(1) B (2) A

(3) E (4) D

**ಕಚ್ಚಾ ಕಾರ್ಯಕ್ಕಾಗಿ ಜಾಗ**



**www.inyatrust.com**

82. ಇವರಲ್ಲಿ ಹಿಂದಿ ಮತ್ತು ಕನ್ನಡವನ್ನು ಮಾತ್ರ ಅಭ್ಯಾಸ ಮಾಡುವವರು ಯಾರು ?

(1) C
(2) B
(3) E
(4) D

83. E = 7, HARD = 39 ಆದರೆ SOFT ಎಂಬುದರ ಬೆಲೆ ಏನು ?


(1) 64
(2) 60
(3) 70
(4) 68

84. ಅರ್ಥಪೂರ್ಣ ಗಣಿತ ಸಮೀಕರಣ ಮಾಡಲು, ಕೊಟ್ಟಿರುವ ಯಾವ ಚಿನ್ಹೆಯ ಗಣಗಳನ್ನು (*) ಜಾಗದಲ್ಲಿ ಅನುಕ್ರಮವಾಗಿ ಆದೇಶಿಸಬೇಕು ?

$14 * 7 * 9 * 112 * 5$

(1) ×, +, =, −
(2) ÷, =, +, ×
(3) ×, −, =, +
(4) ÷, +, =, ×

85. ಕೊಟ್ಟಿರುವ ಚಿತ್ರದಲ್ಲಿ ಒಂದು ವೃತ್ತಾಕಾರದ ಹಾಳೆಯನ್ನು ಬಿಂದುರೇಖೆಗಳ ಮೂಲಕ ತೋರಿಸಿದಂತೆ ಮಡಿಸಲಾಗಿದೆ. ಹಾಳೆಯನ್ನು ಯಾವ ರೀತಿ ಕತ್ತರಿಸಿದೆ ಎಂಬುದನ್ನು ಕೊನೆಯ ಚಿತ್ರದಲ್ಲಿ ತೋರಿಸಿದೆ. ಇದನ್ನು ಬಿಡಿಸಿದಾಗ ಈ ಹಾಳೆಯು ಯಾವ ರೀತಿ ಕಾಣಿಸುತ್ತದೆ ?



(1) (2) (3) (4)

ಕಚ್ಚಾ ಕಾರ್ಯಕ್ಕಾಗಿ ಜಾಗ



www.inyatrust.com

86. ಈ ಸಂಖ್ಯಾ ಶ್ರೇಣಿಯಲ್ಲಿ ಬಿಟ್ಟು ಹೋಗಿರುವ ಸಂಖ್ಯೆಯನ್ನು ಕಂಡು ಹಿಡಿಯಿರಿ.

1, 2, 3, 5, 8, 13, ?

(1) 21 (2) 23

(3) 18 (4) 20

87. ಒಂದು ಸಂಕೇತದ ಪ್ರಕಾರ HOUSE ನ್ನು IMXOJ ಎಂದು ಬರೆದರೆ, ಅದೇ ಸಂಕೇತದ ಪ್ರಕಾರ SHELF ನ್ನು ಹೀಗೆ ಬರೆಯಬಹುದು.

(1) FTHHI (2) SELLK


(3) TFHHK (4) TELLM

88. ವರ್ಷದ (ನಾಲ್ಕು ವರ್ಷಕ್ಕೊಮ್ಮೆ ಬರುವ ಒಂದು ಅಧಿಕ ದಿನವಿರುವ ವರ್ಷವನ್ನು ಹೊರತುಪಡಿಸಿ) ಮೊದಲನೆಯ ದಿನ ಭಾನುವಾರವಾದರೆ, ಆ ವರ್ಷದ ಕೊನೆಯ ದಿನ ಯಾವ ವಾರವಾಗಿರುತ್ತದೆ ?

(1) ಸೋಮವಾರ (2) ಭಾನುವಾರ

(3) ಶುಕ್ರವಾರ (4) ಬುಧವಾರ

89. ಕೆಳಗೆ ಕೊಟ್ಟಿರುವ ಚಿತ್ರದಲ್ಲಿ ಬಿಟ್ಟು ಹೋಗಿರುವ ಸಂಖ್ಯೆಯನ್ನು ಕಂಡುಹಿಡಿಯಿರಿ.




(1) 70 (2) 76


(3) 33 (4) 58

ಕಚ್ಚಾ ಕಾರ್ಯಕ್ಕಾಗಿ ಜಾಗ



www.inyatrust.com


**90.** ಕೊಟ್ಟಿರುವ ಆಕೃತಿಯಲ್ಲಿ ಎಷ್ಟು ತ್ರಿಭುಜಗಳಿವೆ ?



(1) 8 (2) 10

(3) 5 (4) 6

**91.** ಕೆಳಗಿನ ಚಿತ್ರದಲ್ಲಿ ವಿವಿಧ ಉಪಭಾಗಗಳಲ್ಲಿರುವ ಸಂಖ್ಯೆಗಳು ಬೇರೆ ಬೇರೆ ಕ್ರೀಡೆಗಳನ್ನು ಆಡುವ ವಿದ್ಯಾರ್ಥಿಗಳ ಸಂಖ್ಯೆಗಳನ್ನು ಸೂಚಿಸುತ್ತವೆ. ಹಾಗಾದರೆ, ಯಾವುದಾದರೂ ಎರಡು ಕ್ರೀಡೆಗಳನ್ನು ಆಡುವ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು ?




(1) 32 (2) 26

(3) 54 (4) 34

**92.** EXAMINATIONS ಎಂಬುದರ ಸಂಕೇತವು 123456375869 ಆದರೆ MAXIMISATION ಎಂಬುದರ ಸಂಕೇತ ಯಾವುದು ?

(1) 432545937586

(2) 453239546857

(3) 423454973856


(4) 345254395768

ಕಚ್ಚಾ ಕಾರ್ಯಕ್ಕಾಗಿ ಜಾಗ



www.inyatrust.com

**93.** ಈ ಕೆಳಗಿನ ಆಕೃತಿಯಲ್ಲಿ ಬಿಟ್ಟು ಹೋಗಿರುವ ಸಂಖ್ಯೆಯನ್ನು ಕಂಡುಹಿಡಿಯಿರಿ :




(1) 36 (2) 32
(3) 42 (4) 40


**94.** ಒಂದು ಅಕ್ಷರಗಳ ಗುಂಪು ಮಿಕ್ಕ ಗುಂಪುಗಳಿಗಿಂತ ಬೇರೆಯಾಗಿದೆ. ಹೀಗೆ ಬೇರೆಯಾಗಿರುವ ಗುಂಪನ್ನು ಕಂಡುಹಿಡಿಯಿರಿ

(1) J F B H D (2) B W S Y U
(3) I E A G C (4) S O K Q M

**95.** A ಎಂದರೆ +, B ಎಂದರೆ –, C ಎಂದರೆ ÷ ಮತ್ತು D ಎಂದರೆ × ಆದರೆ, 18 A 12 C 6 D 2 B 5 ಇದರ ಬೆಲೆಯನ್ನು ಕಂಡುಹಿಡಿಯಿರಿ.

(1) 25 (2) 27
(3) 17 (4) 20

**96.** ಕೊಟ್ಟಿರುವ ಆಕೃತಿಯಲ್ಲಿ ಎಷ್ಟು ವರ್ಗಗಳಿವೆ ?



(1) 17 (2) 20
(3) 12 (4) 14

ಕಚ್ಚಾ ಕಾರ್ಯಕ್ಕಾಗಿ ಜಾಗ



www.inyatrust.com

**97.** A ಮತ್ತು B ಸಹೋದರರು. C ಯು A ಯ ಸಹೋದರಿ, D ಯು E ಯ ಸಹೋದರ, E ಯು B ಯ ಮಗಳು. F, A ಯ ತಂದೆಯಾದರೆ, D ಯ ಚಿಕ್ಕಪ್ಪನು ಯಾರು ?

(1) B
(2) A
(3) F
(4) E


**98.** ಕೊಟ್ಟಿರುವ ಪ್ರಶ್ನೆಯು ಅಕ್ಷರ ಮತ್ತು ಸಂಖ್ಯೆಗಳ ಅನುಕ್ರಮವನ್ನು ಆಧರಿಸಿದೆ. ಇದರ ಸಹಾಯದಿಂದ ಶ್ರೇಣಿಯಲ್ಲಿ ಬಿಟ್ಟುಹೋಗಿರುವುದನ್ನು ಕಂಡುಹಿಡಿಯಿರಿ.

B 3 K G 5 P D 7 9 E 6 J
I M T 6 Z H Q 8 W 2 A

3 G P, D 9 6, J M 6, ?

(1) 6 H 8
(2) T Z Q
(3) Z H W
(4) Z Q W

ಪ್ರಶ್ನೆ **99** ಮತ್ತು **100** ಈ ಕೆಳಗೆ ಕೊಟ್ಟಿರುವ ವೆನ್‌ಚಿತ್ರಗಳನ್ನು ಅವಲಂಬಿಸಿವೆ.



1 2 3 4

**99.** ಚಿತ್ರ ತಾರೆಯರು, ಸೌಂದರ್ಯ ರಾಣಿಯರು ಹಾಗೂ ನರ್ತಕಿಯರನ್ನು ಯಾವ ವೆನ್ ಚಿತ್ರವು ನಿರೂಪಿಸುತ್ತದೆ ?

(1) 2
(2) 1
(3) 4
(4) 3

**100.** ಗಂಡಸರು, ಹೆಂಗಸರು ಮತ್ತು ಅಕ್ಷರಸ್ಥರನ್ನು ಯಾವ ವೆನ್ ಚಿತ್ರವು ನಿರೂಪಿಸುತ್ತದೆ ?

(1) 3
(2) 4
(3) 1
(4) 2

---

**ಕಚ್ಚಾ ಕಾರ್ಯಕ್ಕಾಗಿ ಜಾಗ**



**www.inyatrust.com**